ಇದೆಯಲ್ವಾ?... ಅದಕ್ಕೆ ಹಾಗೆ...'' ಅವನು ಹೇಳಿದ: ''ಅದಕ್ಕೆ ಅವರಿಗೆ ಇಷ್ಟು ಆಡಂಬರದ ಪ್ರದರ್ಶನ...''

''ಅವರ ಜಂಬ, ಆಡಂಬರವೆಲ್ಲ ಅವರ ಹತ್ತಿರವೆ ಇರಲಿ...'' ಅವಳು ಹೇಳಿದಳು.

ಅವರಾಗಲೇ ಶಾಲೆ ಮುಂಭಾಗ ತಲುಪಿಯಾಗಿತ್ತು. ಗಾಜುಗಳನ್ನು ಅಂಟಿಸಿದ ಶಾಲೆ ಗೋಡೆಗಳ ತುಂಬ ಸಿನಿಮಾ ಪೋಸ್ಟರುಗಳು, ಘೋಷಣಾ ವಾಕ್ಯಗಳಿಂದ ತುಂಬಿಕೊಂಡಿದ್ದವು. ಪೋಸ್ಟರುಗಳನ್ನು ಅಂಟಿಸಬಾರದು ಎಂದು ಸುಣ್ಣದಲ್ಲಿ ಬರೆದಿಟ್ಟಿದ್ದನ್ನು ಯಾರೋ ಉಜ್ಜಿ ಅಳಿಸಿಹಾಕಲು ಪ್ರಯತ್ನಿಸಿದ್ದಾರೆ. ಕೊಂಡಿ ಮುರಿದುಹೋದ ಗೇಟನ್ನು ಅಲ್ಲಿಂದ ತೆಗೆದು, ಕಾಂಪೌಂಡಿಗೆ ತಾಗಿಸಿ ಇಟ್ಟಿದ್ದಾರೆ. ರಿಪಬ್ಲಿಕ್ ಡೇಗೆ ಹೆಡ್‌ಮಾಸ್ಟರು ಬಾವುಟ ಏರಿಸುವ ಧ್ವಜಸ್ತಂಭದ ಮೇಲೆ ಒಂದು ಕಾಗೆ ಕುಳಿತಿತ್ತು. ಕಾಲು ಜಾರಿ ಬ್ಯಾಲನ್ಸ್ ತಪ್ಪಿದಾಗ, ಅದು ರೆಕ್ಕೆ ಬಡಿಯುತ್ತಾ ಮೇಲಕ್ಕೆ ಹಾರಿ, ಮತ್ತೆ ಹಿಂದಿನಂತೆ ಧ್ವಜಸ್ತಂಭದ ತುದಿಗೆ ಬಂದು ಕುಳಿತಿತ್ತು. ಮಕ್ಕಳು ಕಾಂಪೌಂಡಿನ ಮೂಲಕ ಆಚೆಗೂ ಈಚೆಗೂ ಓಡಾಡುತ್ತಿದ್ದರು. ಶೌಚಾಲಯದ ಒಳಗಡೆಗೆ ಹೋಗದೆ, ಹೊರಗಡೆಯಿಂದಲೇ ಗಂಡುಮಕ್ಕಳು ಅದರ ಗೋಡೆಯ ಮೇಲೆಯೇ ಮೂತ್ರ ಮಾಡಿದರು.

''ಒಮ್ಮೆ ನೋಡ್ಲೇನು?...''

''ಏನು?...''

''ಬೌಂಡ್ ನೋಟ್‌ಬುಕ್...''

''ಅಯ್ಯೋ... ಬೇಡ ಮಕ್ಕಳು ನೋಡ್ತಾರೆ...''

''ಇಲ್ಲ...''

ಅವಳೊಮ್ಮೆ ನಾಲ್ಕೂ ಕಡೆ ನೋಡಿ, ಬೌಂಡ್‌ಬುಕ್ಕನ್ನು ಅವನ ಕೈಗೆ ಹಸ್ತಾಂತರಿಸಿದಳು.

ಅವನು ಅದನ್ನು ಅವನ ಪುಸ್ತಕದ ಚೀಲದೊಳಗೆ ಅಡಗಿಸಿಟ್ಟ.

''ಸೆಕೆಂಡ್ ಪಿರಿಯಡ್‌ಗೆ ವಾಪಸ್ ಕೊಡಬೇಕು...''

''ಆಯ್ತು ಕೊಡ್ತೆನಿ...''

''ಬೇರೆ ಯಾರಿಗೂ ತೋರಿಸಬಾರದು...''

''ಇಲ್ಲಪ್ಪ... ಯಾರಿಗೂ ತೋರಿಸಲ್ಲ...''

ಕಾಂಪೌಂಡಿನ ಹತ್ತಿರ ನಿಂತಿದ್ದ ಅವಳ ಕ್ಲಾಸಿನ ಒಂದಷ್ಟು ಹೆಣ್ಣುಮಕ್ಕಳಿದ್ದ ಗುಂಪಿನೆಡೆಗೆ ಓಡಿಹೋಗಿ ಸೇರಿಕೊಂಡಳು. ಬೆಲ್ಲು ಹೊಡೆಯುವ ಸಮಯವಾಗಿದ್ದರೂ ಅವನು ಆ ಶೌಚಾಲಯದ ಕಡೆ ಹೋದ. ಗಟ್ಟಿಯಾಗಿ ಮೂಗನ್ನು ಮುಚ್ಚಿಕೊಂಡು ಅದರೊಳಗೆ ಹೋಗಬೇಕಾಯಿತು. ಅಲ್ಲಿ ನಿಂತುಕೊಂಡೇ ಅವನು ಬೌಂಡ್‌ಬುಕ್ ತೆರೆದು ನೋಡಿದ. ಅದರಲ್ಲಿ ವಧು ವರರ ಬಹಳಷ್ಟು ಫೋಟೊಗಳಿದ್ದವು. ಹಿಂದಿನ ದಿನ ಅವಳು ಅಂಟಿಸಿದ್ದ ಚಿತ್ರಗಳಲ್ಲಿ, ಸತೀಶ್ ಮತ್ತು ಸ್ವಪ್ನಾರ ಫೋಟೊ ಅವನಿಗೆ ಇಷ್ಟವಾಯಿತು. ಅವನು ಬೆಲ್ಲು ಹೊಡೆಯುವವರೆಗೂ ಆ ಫೋಟೊಗಳ ಮೇಲೆಯೇ ದೃಷ್ಟಿ ಹರಿಸುತ್ತಾ ನಿಂತ. ಹೊರಗಡೆ ಗಂಡುಮಕ್ಕಳ ಕೂಗಾಟ, ಗೋಡೆಯ ಮೇಲೆ ಮೂತ್ರ ಬೀಳುವ ಶಬ್ದ ಕೇಳಿಸುತ್ತಿತ್ತು. ಬೆಲ್ಲು ಹೊಡೆಯುತ್ತಿದ್ದಂತೆ, ಬೌಂಡ್‌ಬುಕ್ಕನ್ನು ಪುಸ್ತಕದ ಚೀಲದೊಳಗಿಟ್ಟು ಹೊರಗಡೆ ಬಂದ. ಉಳಿದ ಮಕ್ಕಳೊಂದಿಗೆ ಕೂಗಾಟವಾಡುತ್ತಾ ಕ್ಲಾಸಿನೊಳಗೆ ಓಡಿಹೋದ.

''ನಾವೊಂದು ಫೋಟೊ ತೆಗೆಸಿಕೊಳ್ಳಬೇಕು. ಸತೀಶಣ್ಣ ಮತ್ತು ಸ್ವಪ್ನಕ್ಕರ ತರಹದ್ದು...'' ಶಾಲೆ ಬಿಟ್ಟು ಹೋಗುವಾಗ ಅವನು ಹೇಳಿದ.

''ಅಯ್ಯೋ... ಆ ರೀತಿ ಫೋಟೊ ತೆಗೆಸಿಕೊಳ್ಳೊದಿಕ್ಕೆ ನಾವು ಇನ್ನೂ ಮಕ್ಕಳಷ್ಟೆಯಲ್ವಾ?...'' ಅವಳು ಕೇಳಿದಳು.